1	2	3
		116. Sira
		117. Turvekere
		118. Chikkanayaka nahalli
		119. Pavagada
		120. Tiptur
Uttara Kannada		121. Karwar
		122. Haliyal
		123. Ankola
		124. Sirsi
		125. Yellapur
		126. Bhatkal
		127. Honnavar
		128. Kumta
		129. Mundgod
		130. Siddapur
		131. Supa

ರೈತರಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ.

1689 ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) ಚ ಮಾನ್ಯ ಕೈಗಾರಿಕೆ ಮತ್ತು ಇಂಧನ, ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರು ವ್ಯವಸಾಯಕ್ಕಾಗಿ ಬೋರ್‌ವೆಲ್ ಅಥವಾ ತೆರೆದ ಬಾವಿಗಳಿಗೆ ವಿದ್ಯುಚ್ಛಕ್ತಿ ಸರಬರಾಜಿಗೆ ಸಲ್ಲಿಸಿರುವ ಮನವಿಗಳೇಷ್ಟು?

ಆ) ರೈತರು (ವ್ಯವಸಾಯಕ್ಕಾಗಿ) ವಿದ್ಯುಚ್ಛಕ್ತಿಗೆ ಮನವಿ ಸಲ್ಲಿಸಿದಾಗ ಕೂಡಲೇ ವಿದ್ಯುತ್ ಒದಗಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಇದ್ದರೆ ಯಾವಾಗ ಹಾಗಿದ್ದಲ್ಲಿ ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು.)

ಅ) 1989-90ನೇ ಸಾಲಿನಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುಚ್ಛಕ್ತಿ ಸರಬರಾಜಿಗಾಗಿ (ಬೋರ್‌ವೆಲ್ ಮತ್ತು ತೆರೆದ ಬಾವಿಗಳಿಗೆ) 65,239 ಅರ್ಜಿಗಳು ಮಂಡಳಿಯ ವಿವಿಧ ಕಛೇರಿಗಳಲ್ಲಿ ನೊಂದಾಯಿತವಾಗಿದ್ದವು.

ಆ) ರಾಜ್ಯದಲ್ಲಿ ಮಂಡಳಿಯು ರೈತರ ನೀರಾವರಿ ಪಂಪುಸೆಟ್ಟುಗಳಿಗೆ ಸರ್ಕಾರವು ಆಂಗೀಕರಿಸಿರುವ 'ರೋಸ್ಟರ್' ಪದ್ಧತಿಯನ್ನು ಅನುಸರಿಸಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದೆ. ಅಲ್ಲದೆ ಮಂಡಳಿಯು ತನಗೆ ಲಭ್ಯವಿರುವ ಹಣಕ್ಕನುಗುಣವಾಗಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕೆ ವಾರ್ಷಿಕ ಗುರಿಯನ್ನು ನಿಗದಿ ಮಾಡುತ್ತಿದ್ದು ಕಳೆದ ಕೆಲವು ವರ್ಷಗಳಲ್ಲಿ ಈ ದಿಶೆಯಲ್ಲಿ ಗುರಿ ಮೀರಿದ ಸಾಧನೆಯನ್ನು ಸಹ ಮಾಡುತ್ತಿದೆ. ರಾಜ್ಯದಲ್ಲಿ ಈಗ ನೀರಾವರಿ ಪಂಪುಸೆಟ್ಟುಗಳ ವಿದ್ಯುಚ್ಛಕ್ತಿಗಾಗಿ ಬೇಡಿಕೆ ಅಗಾಧವಾಗಿರುತ್ತದೆ. ಆದ್ದರಿಂದ, ಒಂದು ವರ್ಷದಲ್ಲಿ ನೊಂದಾಯಿತವಾದ

ಎಲ್ಲಾ ನೀರಾವರಿ ಪಂಪುಸೆಟ್ಟುಗಳ ಅರ್ಜಿದಾರರಿಗೂ ಆದೇ ವರ್ಷವೇ ವಿದ್ಯುತ್ ಸಂಪರ್ಕ ನೀಡುವುದು ಕಷ್ಟ ಸಾಧ್ಯ.

ಇ) 'ಆ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿನ ವಿದ್ಯುತ್ ಉತ್ಪಾದನೆ ಬಗ್ಗೆ.

1452 ಶ್ರೀ ಎಂ. ನಾರಾಯಣಸ್ವಾಮಿ, (ಬೇತಮಂಗಲ):- ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದ ವಿದ್ಯುತ್ ಉತ್ಪಾದನೆ ಪ್ರಮಾಣವೆಷ್ಟು?

ಆ) ಈ ಪೈಕಿ ಗ್ರಾಮಾಂತರ ಪ್ರದೇಶಕ್ಕೆ ಎಷ್ಟು ಪ್ರಮಾಣದಲ್ಲಿ ಸರಬರಾಜು ಆಗುತ್ತಿದೆ, ವಿಶೇಷವಾಗಿ ವ್ಯವಸಾಯಕ್ಕೆ ಎಷ್ಟು ಪ್ರಮಾಣದಲ್ಲಿ ಸರಬರಾಜು ಆಗುತ್ತಿದೆ.

ಇ) ಈ ಪೈಕಿ ನಗರ ಪ್ರದೇಶಗಳಿಗೆ ಎಷ್ಟು ವಿದ್ಯುಚ್ಛಕ್ತಿ ಸರಬರಾಜು ಆಗುತ್ತಿದೆ;

ಈ) ಕೈಗಾರಿಕೆಗಳಿಗೆ ಎಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗುತ್ತಿದೆ?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು):-

ಅ) ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ 1989-90ನೇ ಸಾಲಿನಲ್ಲಿ 11.211 ದಶಲಕ್ಷ ಯೂನಿಟ್‌ಗಳಷ್ಟು (ತಾತ್ಕಾಲಿಕ) ವಿದ್ಯುತ್ ಅನ್ನು ಉತ್ಪಾದಿಸಲಾಯಿತು.

ಆ) ಈ ಪೈಕಿ ಶೇ. 15.51ರಷ್ಟನ್ನು ಗ್ರಾಮಾಂತರ ಪ್ರದೇಶಗಳಿಗೆ ಸರಬರಾಜು ಮಾಡಲಾಯಿತು. ಇದರಲ್ಲಿ ನೀರಾವರಿ ಪಂಪುಸೆಟ್ಟುಗಳಿಂದ ಬಳಕೆಯಾದ ವಿದ್ಯುತ್ತಿನ ಪ್ರಮಾಣ ಶೇ.28.63 ರಷ್ಟಿದ್ದಿತು..

ಇ) ನಗರ ಪ್ರದೇಶಗಳಿಗೆ ಸರಬರಾಜಾದ ವಿದ್ಯುತ್ತಿನ ಪ್ರಮಾಣ ಶೇ. 64.49.

ಈ) ನಗರ ಪ್ರದೇಶಗಳಿಂದ ಸರಬರಾಜು ಮಾಡಿದ ಶೇ. 64.49ರ ಪೈಕಿ ಕೈಗಾರಿಕೆಗಳಿಗೆ (ಎಲ್.ಟಿ. ಮತ್ತು ಹೆಚ್.ಟಿ. ಎರಡೂ ಸೇರಿ) ಸರಬರಾಜಾದ ವಿದ್ಯುತ್ತಿನ ಪ್ರಮಾಣ ಶೇ. 51.56 ರಷ್ಟಿದ್ದಿತು.

ಅರಸೀಕೆರೆ ತಾಲ್ಲೂಕ್ ಮಂಗಳಾಪುರದ ತಾಮ್ರದ ಗಣಿಯ ಬಗ್ಗೆ.

1681 ಶ್ರೀ ಜಿ. ಶಿವರಾಮು (ಗಂಡಸಿ):- ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಯೋಜನೆ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ!

ಅ) ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿಯ ಮಂಗಳಾಪುರದಲ್ಲಿರುವ ತಾಮ್ರದ ಗಣಿಯ ಪರಿಸ್ಥಿತಿ ಏನು;

ಆ) ಈ ಗಣಿಗೆ ಖರ್ಚಾಗಿರುವ ಮೊತ್ತವೆಷ್ಟು;

ಇ) ಮುಂದೆ ಈ ಗಣಿಯ ಬಗ್ಗೆ ಹಾಕಿಕೊಂಡಿರುವ ಯೋಜನೆ ಏನು;

ಈ) ಅರಸೀಕೆರೆ ತಾಲ್ಲೂಕ್ ಗಂಡಸಿ ಹೋಬಳಿ ಆಲದ ಹಳ್ಳಿ ಕ್ರೋಮೈಟ್ ಗಣಿ ಪ್ರಾರಂಭವಾಗಿ ಎಷ್ಟು ವರ್ಷವಾಯಿತು;

ಉ) ಸರ್ಕಾರ ಗಣಿಗೆ ವಶಪಡಿಸಿಕೊಂಡಿರುವ ಭೂಮಿಗೆ ಪ್ರತಿ ಎಕರೆಗೆ ಕೊಟ್ಟಿರುವ ಪರಿಹಾರ ನನವೆಷ್ಟು;

ಊ) ಹೆಚ್ಚು ಉತ್ಪಾದನೆಗೆ ಏನಾದರು ತಾಂತ್ರಿಕ ಸಲಕರಣೆಗಳನ್ನೂ ಅಳವಡಿಸುವ ಆಲೋಚನೆ ಇದೆಯೆ?